ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಶುಕ್ರವಾರ, ೨೭ನೇ ಸೆಪ್ಟೆಂಬರ್ ೧೯೯೧, ಆಶ್ವಯುಜ ೫, ೧೯೧೩

ಸದನವು ವಿಧಾನಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯ ಗಂಟೆ ೩೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ: (ಶ್ರೀ ಎಸ್.ಎಂ. ಕೃಷ್ಣ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ನಗರದಲ್ಲಿರುವ ಬಡವರಿಗೆ ಹಸಿರು ಪಡಿತರ ಚೀಟಿ ಸೌಲಭ್ಯ ವಿಸ್ತರಿಸುವ ಬಗ್ಗೆ.

2825 - ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣದ ಬಡ ಜನರಿಗೆ ಹಸಿರು ಕಾರ್ಡು ಸೌಲಭ್ಯವನ್ನು ವಿಸ್ತರಿಸಲಾಗುವುದೇ?

ಆ) ಹಾಗಿಲ್ಲದಿದ್ದಲ್ಲಿ, ಪಟ್ಟಣ ಪ್ರದೇಶಗಳಲ್ಲಿರುವ ಬಡ ಜನರಿಗೆ ಹಸಿರು ಕಾರ್ಡು ಸೌಲಭ್ಯವನ್ನು ವಿಸ್ತರಿಸುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 17 ಜಿಲ್ಲೆಗಳಲ್ಲಿ 20,000 ಜನಸಂಖ್ಯೆಗಿಂತ ಕಡಿಮೆ ಇರುವ 45 ಅರೆ ಪಟ್ಟಣ ಪ್ರದೇಶಗಳಿಗೆ ಹಸಿರು ಕಾರ್ಡು ಸೌಲಭ್ಯವನ್ನು ವಿಸ್ತರಿಸಲಾಗಿದೆ.

ಆ) ಉಳಿದ ಪಟ್ಟಣ ಪ್ರದೇಶಗಳಿಗೆ ಈ ಯೋಜನೆಯನ್ನು ವಿಸ್ತರಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಸಭಾಧ್ಯಕ್ಷರೇ, ನಾನು ಕೇಳಿರುವ ಪಶ್ನೆಯೆಂದರೆ ಪಟ್ಟಣದ ಬಡ ಜನರಿಗೂ ಹಸಿರು ಕಾರ್ಡು ಸೌಲಭ್ಯವನ್ನು ವಿಸ್ತರಿಸಲಾಗುವುದೇ ಎಂದು ಇದಕ್ಕೆ ಉತ್ತರವಾಗಿ 20 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ 45 ಅರೆ-ಪಟ್ಟಣ ಪ್ರದೇಶಗಳಲ್ಲಿ ಹಸಿರು ಕಾರ್ಡು ಸೌಲಭ್ಯವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ, ನಮಗೆ ಸ್ವಾತಂತ್ರ್ಯ ಬಂದು 45 ವರ್ಷವಾಗಿದೆ; ನಾವು ಇನ್ನೂ ಬಡಜನರು, ಗ್ರಾಮವಾಸಿಗಳು, ಪಟ್ಟಣದಲ್ಲಿರುವ ಬಡಜನರು ಎಂದು ಬೇರೆ ಬೇರೆ ಎಂದು ಪರಿಗಣಿಸಿಕೊಂಡು ಬರುತ್ತಿದ್ದೇವೆ. ಸ್ವಾತಂತ್ರ್ಯ ಬಂದು 45 ವರ್ಷವಾದರೂ ಬಡ ಜನರನ್ನು ನಾವು ಗುರುತಿಸಿಲ್ಲ, ಇಂತಹ ಜನರು ಪಟ್ಟಣದಲ್ಲಿರುವವರೂ ಬಡ ಜನರೇ, ಗ್ರಾಮಾಂತರ ಪ್ರದೇಶದಲ್ಲಿರುವವರೂ

ಬಡ ಜನರೇ. ಗ್ರಾಮಾಂತರ ಪ್ರದೇಶದವರಿಗೆ ಹಸಿರು ಕಾರ್ಡು ಕೊಟ್ಟು ಪಟ್ಟಣದಲ್ಲಿರುವವರಿಗೆ ಕೊಟ್ಟಿಲ್ಲ, ಅದೇ ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಕೆಲಸ ಸಿಕ್ಕುವುದಿಲ್ಲವೆಂದು, ಪಟ್ಟಣದಲ್ಲಿ ಬಂದು ನೆಲೆಸಿರುವ ಜನರೂ ಬಡವರೇ. ಈ ಜನರಿಗೆ ಅಲ್ಲಿ ಉದ್ಯೋಗ ಸಿಕ್ಕದಿರುವ ಪರಿಸ್ಥಿತಿ ಇರುವಾಗ ಹತ್ತಿರದ ಪಟ್ಟಣಕ್ಕೋ, ನಗರಕ್ಕೋ ಬಂದು ಇಲ್ಲಿ ನೆಲೆಸಿ ಕೂಲಿ ಕೆಲಸ ಮಾಡಿಕೊಂಡು ನಿತ್ಯ ಸಂಪಾದನೆ ಮಾಡಿಕೊಂಡು ಜೀವನ ಮಾಡುತ್ತಿರುವ ಇವರೂ ಕೂಡ ಬಡ ಜನರೇ. ಇಷ್ಟು ವರ್ಷವಾದರೂ ಇಂತಹ ಬಡವರನ್ನು ಗುರುತಿಸಿ, ಹಸಿರು ಕಾರ್ಡು ಕೊಟ್ಟಿರುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಇಂತಹ ಬಹಳಷ್ಟು ಲೋಪದೋಷ ಆಗಿದೆ. ಮತ್ತೆ ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಸರ್ಕಾರವು ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು 45 ವರ್ಷವಾದರೂ ಇನ್ನೂ ಪರಿಶೀಲಿಸುತ್ತಾ ಇದ್ದರೆ, ಹೇಗೆ? ತಾವು ಯಾವಾಗ ಪರಿಶೀಲಿಸುತ್ತೀರಿ, ಇದಕ್ಕೆ ಏನಾದರೂ ಒಂದು ಟೈಮ್ ನಿಗದಿ ಮಾಡಿ, ಇವರಿಗೂ ಹಸಿರು ಕಾರ್ಡು ಕೊಡುತ್ತೇವೆನ್ನುವುದನ್ನು ಸಚಿವರು ಹೇಳಬೇಕು.

ಶ್ರೀ ಟಿ.ಎಸ್. ನರಸಿಂಹಮೂರ್ತಿ : ಮಾನ್ಯ ಸಭಾಧ್ಯಕ್ಷರೇ, ಬಡವರ ಬಗ್ಗೆ ಅವರಿಗೆ ಇರತಕ್ಕ ಕಳಕಳಿ, ಸರ್ಕಾರಕ್ಕೂ ಇದೆ. ಈಗ ಅವರು ಕೇಳಿರುವ ಪ್ರಶ್ನೆ. ಪಟ್ಟಣದ ಬಡ ಜನರಿಗೂ ಹಸಿರು ಕಾರ್ಡು ಸೌಲಭ್ಯವನ್ನು ವಿಸ್ತರಣೆ ಮಾಡುತ್ತೀರಾ ಎಂದು ಹೇಳಿದ್ದಾರೆ. ಈಗ 20 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರತಕ್ಕ ಪಟ್ಟಣಗಳಿಗೆ ಈಗಾಗಲೇ ಈ ಸೌಲಭ್ಯ ಜಾರಿಗೆ ಬಂದಿದೆ. ಈ ಕ್ರಮವನ್ನು ವಿಸ್ತರಣೆ ಮಾಡುವ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ. ಈ ವಿಚಾರ ಇನ್ನೂ ಚಿಂತನೆಯಲ್ಲಿದೆ. ಅಂತಿಮ ತೀರ್ಮಾನವನ್ನು ಸರ್ಕಾರದ ಹಣಕಾಸಿನ ಭದ್ರತೆಯನ್ನು ನೋಡಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಅವರ ವಾದವನ್ನು ನಾನು ಖಂಡಿತವಾಗಿಯೂ ಒಪ್ಪುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಬೆಂಗಳೂರು ಮಹಾನಗರದಲ್ಲಿ 8 ಲಕ್ಷ ಜನ ಬಡವರು. ಗುಡಿಸಲುವಾಸಿಗಳು ಆಗಿದ್ದಾರೆ. ಈ ಜನಕ್ಕೆ ಸೀಮೆಎಣ್ಣೆ ಸಿಕ್ಕುವುದಿಲ್ಲ, ಅಕ್ಕಿ ಸಿಕ್ಕುವುದಿಲ್ಲ, ಇವರು ಬಹಳಷ್ಟು ಕಡು ಬಡವರು. 1991ನೇ ಇಸವಿ ಬಂದರೂ ಇನ್ನೂ ಪರಿಶೀಲಿಸುತ್ತೇವೆಂದು ಹೇಳಿಕೊಂಡು ಹೋಗುತ್ತಾ ಇದ್ದರೆ ಪ್ರಯೋಜನವಾಗುವುದಿಲ್ಲ. ಬೆಂಗಳೂರು ನಗರದಲ್ಲಿ ಬ್ಲಾಕ್ ಮಾರ್ಕೆಟ್‌ನಲ್ಲಿ 9-10 ರೂಪಾಯಿಗಳಿಗೆ ಸೀಮೆಎಣ್ಣೆ ಮಾರಾಟ ಮಾಡುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಮೂರು ರೂಪಾಯಿಗೆ ಮಾರುವುದನ್ನು 9-10 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಈ ಸೀಮೆಎಣ್ಣೆಯನ್ನು ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರುವವರನ್ನು ಹಿಡಿದು ಕೇಸುಗಳನ್ನೂ ಹಾಕುವುದಿಲ್ಲ. ಜೊತೆಗೆ ಇರತಕ್ಕ ರೇಷನ್ ಕಾರ್ಡುಗಳಿಗೂ ಒದಗಿಸುತ್ತಾ ಇಲ್ಲ. ಈ ಬಡ ಜನರಿಗೆ ಹರಿಸುಕಾರ್ಡು ಕೊಡುವ ಬಗ್ಗೆ ಪರಿಶೀಲಿಸುತ್ತಾ ಇದ್ದರೆ ಆಗುವುದಿಲ್ಲ. ದಯಮಾಡಿ, ಮಾನ್ಯ ಸಚಿವರು ಇದಕ್ಕೆ ಏನಾದರೊಂದು ಟೈಟ್‌ಬಾಂಡ್ ಪ್ರೋಗ್ರಾಂ ಇಟ್ಟು ಮುಂದಿನ ವರ್ಷದ ಬಜೆಟ್‌ನೊಳಗೆ ಇವರಿಗೂ ಹಸಿರು ಕಾರ್ಡು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎಸ್. ನರಸಿಂಹಮೂರ್ತಿ : ಅವರ ಸಲಹೆಯನ್ನು ಪರಿಶೀಲಿಸಲಾಗುವುದು.